ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು—ನಲವತ್ತೊಂದನೆಯ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆ ಮುಂದಿಡಲಾಯಿತು. ಈಗ ಗೈರು ಹಾಜರಿಯಿದ್ದ ಸದಸ್ಯರುಗಳನ್ನು ಮತೋವ್ಮೆ ಕರೆಯುತ್ತೇನೆ.

ಶಿವಮೊಗ್ಗದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ವೆಂಟ್ರಿಕ್ ನಂತರದ ವಿದ್ಯಾರ್ಥಿನಿಲಯ ಸ್ಥಿತಿ

೨೦೦೪. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗದ ವೆಂಟ್ರಿಕ್ ನಂತರದ ಹಿಂದುಳಿದ ಮತ್ತು ಅಲ್ಪಸಂಖ್ಯಾತರುಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಪಾತ್ರೆ ಪದಾರ್ಥಗಳು ಸಾಕಷ್ಟು ಸಂಖ್ಯೆಯಲ್ಲಿರದೇ ಇರುವುದು ಮತ್ತು ಪಾತ್ರೆಗಳಿಗೆ ಕಲಾಯಿ ಮಾಡಿಸದೇ ಅಡಿಗೆ ಮಾಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪಾತ್ರೆ ಪದಾರ್ಥಗಳನ್ನು ಸರಬರಾಜು ಮಾಡಲು ಸರ್ಕಾರದವರೇ ಕ್ರಮ ಕೈಗೊಳ್ಳುವರೆ,

ಇ) ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯದಲ್ಲಿ ಸಮರ್ಪಕವಾದ ವಸತಿ ಸೌಕರ್ಯವಿಲ್ಲದೇ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಈ) ಈಗ ಕಟ್ಟಲಾಗುತ್ತಿರುವ ವಸತಿ ಗೃಹದಲ್ಲಿ ೫೦ ವಿದ್ಯಾರ್ಥಿನಿಯರಿಗೆ ಒಂದು ಹಜಾರದಂತೆ ಅವಕಾಶ ಕಲ್ಪಿಸುವ ಉದ್ದೇಶ ಹೊಂದಿರುವುದರಿಂದ ವಿದ್ಯಾರ್ಥಿನಿಯರಿಗೆ ಅನಾನುಕೂಲ ವಾಗುವುದಿಲ್ಲವೇ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಪಾತ್ರೆಗಳು ಸಾಕಷ್ಟು ಸಂಖ್ಯೆಯಲ್ಲಿಲ್ಲದಿದ್ದರೂ ಕಲಾಯಿ ಮಾಡಿದ ಪಾತ್ರೆಗಳಲ್ಲಿ ಅಡಿಗೆ ತಯಾರಿಸಲಾಗುತ್ತಿದೆ.

ಆ) ಹೌದು.

ಇ) ಹೌದು.

ಈ) ಶಿವಮೊಗ್ಗದಲ್ಲಿ ಸರ್ಕಾರದ ವತಿಯಿಂದ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಕೈ ಗೊಂಡಿಲ್ಲ.

ಮಹಿಳಾ ಮಂಡಳಿಗಳ ಸ್ಥಾಪನೆ ಅನುದಾನದ ಬಗ್ಗೆ

೧೯೭೨. ಶ್ರೀ ಸಿ. ಎಂ. ಉದಾಸಿ (ಹಾನಗಲ್) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಹಿಳಾ ಮಂಡಳಗಳ ಸ್ಥಾಪನಾ ಅನುಧಾನ ಪ್ರತಿ ಮಂಡಳಕ್ಕೆ ಒಂದು ಸಾವಿರ ರೂಪಾಯಿ ಕೊಡಬೇಕಾಗಿದ್ದು ಅದನ್ನು ಕೇವಲ ಕೇಂದ್ರ ಬಾಲವಿಕಾಸ ಯೋಜನೆಗಳಿದ್ದಲ್ಲಿ ಮಾತ್ರ ಕೊಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ರಾಜ್ಯ ಬಾಲವಿಕಾಸ ಯೋಜನೆಗಳಿದ್ದಲ್ಲಿಯೂ ಅನುಧಾನ ಕೊಡಬೇಕಾಗಿರುವುದು ಸರಕಾರದವರ ಗಮನದಲ್ಲಿದೆಯೇ ?

ಇ) ಹಾಗಿದಲ್ಲಿ ಈ ತಾರತಮ್ಯವನ್ನು ಸರಿಪಡಿಸಲು ಸರಕಾರದವರು ಕ್ರಮ ಕೈಗೊಳ್ಳುವರೇ?